**ಮೂ.ದಾ.ನಂ. 70/2021**

ಪಿ.ಡಬ್ಲ್ಯು 1

(ಇಂದು ದಿನಾಂಕ: **27-01-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ. ಎಮ್.ಎನ್.ಎಸ್. ವಕೀಲರಿಂದಃ**

ದಾವಾಸ್ತಿ ಸರ್ವೆ ನಂಬರ 40 ಹಿಸ್ಸಾ 2 ರ ಪೋಟ್ ಹಿಸ್ಸಾ ಪ್ರಕರಣವನ್ನು ರವಿ ಜೋಶಿಯವರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅವರು ನಮಗೆ ಜಾಗವನ್ನು ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ದಾವಾಸ್ತಿಯನ್ನು ಖರೀದಿಸುವ ಕುರಿತಾಗಿ ದಸ್ತಾವೇಜನ್ನು ರವಿ ಜೋಶಿಯವರು ಮಾಡಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾಸ್ತಿ ಸರ್ವೆ ನಂಬರ 40 ಹಿಸ್ಸಾ 2 ಪೋಟ್ ಹಿಸ್ಸಾ ಪ್ರಕರಣದಲ್ಲಿ 1ನೇ ಪ್ರತಿವಾದಿಯರು ಎಡಿಎಲ್ಆರ್ ರವರ ಮುಂದೆ ತಕರಾರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ದಾವಾಸ್ತಿ ಸರ್ವೆ ನಂಬರ 40 ಹಿಸ್ಸಾ 2 ಪೋಟ್ ಹಿಸ್ಸಾ ಮಾಡುವಾಗ ಪ್ರತಿವಾದಿಯರಿಗೆ ಯಾವುದೇ ನೋಟೀಸ ನೀಡದೇ ಅವರ ಕಬ್ಜಾದ ವಹಿವಾಟಿನಲ್ಲಿ ಇದ್ದ 5 ಗುಂಟೆ ಜಾಗವನ್ನು ದಕ್ಷಿಣದಲ್ಲಿ ತೋರಿಸಿದ್ದಾರೆ ಎಂದು ತಕರಾರು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ಈ ವಿಷಯವು ಭೂಮಾಪನ ಇಲಾಖೆಗೆ ಸಂಬಂಧಪಟ್ಟಿರುತ್ತದೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ಈ ಮೇಲೆ ಹೇಳಿದ ಹಾಗೆ ತಕರಾರು ಹಾಕಿದ ಬಗ್ಗೆ ಮಾಹಿತಿ ಇದೆ. 1ನೇ ಪ್ರತಿವಾದಿಯ ಹಕ್ಕಿನ 5 ಗುಂಟೆ ಜಾಗದಲ್ಲಿ ಅವರ ತಂದೆಯಾದ ಸದಾಶಿವ ಮಹಾಬಳೇಶ್ವರ ಅಡಿ, ಗುರುಲಿಂಗ ಇವರ ಹೆಸರು ಇದೆ ಎಂದು ಮೃತಪಟ್ಟಿರುವ ಹೆಸರಿನಲ್ಲಿ ನೋಟೀಸು ನೀಡಿದ್ದಾರೆ ಎಂದು ತಕರಾರನ್ನು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ನನಗೆ ಈ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**ಮೂ.ದಾ.ನಂ. 70/2021**

ಪಿ.ಡಬ್ಲ್ಯು 1

ಈ ವಿಷಯವನ್ನು ಪರಿಗಣನೆಗೆ ತೆಗೆದುಕೊಳ್ಳದೇ ಎಡಿಎಲ್ಆರ್ ಕುಮಟಾ ಇವರು ಕಾನೂನು ಬಾಹಿರವಾಗಿ ಫೋಟ್ ಹಿಸ್ಸಾ ವನ್ನು ಮಾಡಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಕುರಿತಾಗಿ ಎಲ್ಲಾ ಪ್ರತಿವಾದಿಯರು ಡಿ.ಡಿ.ಎಲ್.ಆರ್. ಕಾರವಾರ ಇವರಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಷದ್ರಿ ಮೇಲ್ಮನವಿಯಲ್ಲಿ ನಾನು ಹಾಗೂ 2ನೇ ವಾದಿ ಹಾಗೂ ನಮಗೆ ದಾವಾಸ್ತಿಯನ್ನು ಮಾರಾಟ ಮಾಡಿದ ಮಾಲಕರು ಎದುರುದಾರರಾಗಿರುತ್ತೇವೆ ಎಂದರೆ ಸರಿ

ನಾವು ಅದೇ ವೇಳೆಯಲ್ಲಿ ದಾವಾಸ್ತಿಯ ಅನುಕ್ರಮ ನಂಬರ 2 ರ ಆಸ್ತಿಯನ್ನು ಬಿನ್ ಶೇತ್ಕಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ ಬಿನ್ ಶೇತ್ಕಿ ಮಾಡಿಕೊಳ್ಳುವ ಸಂದರ್ಭದಲ್ಲಿ 15 ಗುಂಟೆಗಳ ಪೈಕಿ 5 ಗುಂಟೆಗಳ ಸ್ಥಳವು ಪ್ರತಿವಾದಿಯರ ಕಬ್ಜಾ ವಹಿವಾಟಿನಲ್ಲಿ ಇತ್ತು ಎಂದರೆ ಸರಿಯಲ್ಲ. ನಾವು ಪ್ರತಿವಾದಿಯರ ಬೆನ್ನಿನ ಹಿಂದೆ ವಸ್ತುಸ್ಥಿತಿಯನ್ನು ಮುಚ್ಚಿ ಇಟ್ಟು ಬಿನ್ಶೇತ್ಕಿಯನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಜಾಗವನ್ನು ರವೀಂದ್ರ ಜೋಶಿ ಹಾಗೂ ನನ್ನ ತಂದೆ ಕೂಡಿ ಬೀನ್ಶೇತ್ಕಿಯನ್ನು ಮಾಡಿಕೊಂಡಿರುತ್ತಾರೆ. ಈ ವಿಷಯ ಪ್ರತಿವಾದಿಯರಿಗೆ ತಿಳಿದ ಕೂಡಲೇ ಅವರು ಮರು ಪರಿಶೀಲನಾ ಅರ್ಜಿಯನ್ನು ಜಿಲ್ಲಾಧಿಕಾರಿಗಳ ಮುಂದೆ ಸಲ್ಲಿಸಿದ್ದಾರೆ ಎಂದರೆ ಸರಿ. ಈ ವಿಷಯವು ವಿಚಾರಣೆಗೆ ಬಾಕಿ ಇದೆ ಎಂದರೆ ಸರಿಯಲ್ಲ. ಷದ್ರಿ ಪ್ರಕರಣವು ವಿಚಾರಣೆಯಾಗಿ ಮುಗಿದಿರುತ್ತದೆ. ಈ ಕುರಿತಾಗಿ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನನಗೆ ದಾಖಲಾತಿಯನ್ನು ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ.

**ಮೂ.ದಾ.ನಂ. 70/2021**

ಪಿ.ಡಬ್ಲ್ಯು.1

ಈ ದಾವೆ ವಿಚಾರಣೆಯಲ್ಲಿ ಇರುವಾಗ ಪ್ರತಿವಾದಿಯರು ಪೋಟ್ ಹಿಸ್ಸಾ ಪ್ರಕರಣವನ್ನು ಪ್ರಶ್ನಿಸಿ ಡಿ.ಡಿ.ಎಲ್.ಆರ್.ಕಾರವಾರ ರವರಲ್ಲಿ ಸಲ್ಲಿಸಿದ ಮೇಲ್ಮನವಿ ಕವಿಚಾರಣೆ ಆದ ನಂತರ ಅದರ ಆದೇಶವನ್ನು ಪ್ರಶ್ನಿಸಿ ಕೆಇಟಿ ಬೆಂಗಳೂರಿನಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಕೆಇಟಿ ಬೆಂಗಳೂರು ನಿಂದ ಷದ್ರಿ ಪ್ರಕರಣವನ್ನು ಈಗ ಬೆಳಗಾವಿಗೆ ವಿಚಾರಣೆಗಾಗಿ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಈಗ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಈಗ ಅದು ಬೆಳಗಾವಿನಲ್ಲಿ ವಿಚಾರಣೆಗೆ ಬಾಕಿ ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಈ ದಾವೆಯನ್ನು ದಾಖಲು ಮಾಡುವ ಸಂದರ್ಭದಲ್ಲಿ ದಾವಾಸ್ತಿ ಸರ್ವೆ ನಂಬರ 40 ಹಿಸ್ಸಾ 2 ರಲ್ಲಿನ ಕ್ಷೇತ್ರ 15 ಗುಂಟೆ ಸಂಪೂರ್ಣವಾಗಿ ನಮ್ಮ ಕಬ್ಜಾ ವಹಿವಾಟಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಈ ರೀತಿಯಾಗಿ 15 ಗುಂಟೆಯಲ್ಲಿ ಪ್ರತಿವಾದಿಯರ ಮಾಲೀಕತ್ವಕ್ಕೆ ಒಪ್ಪಿದ ದಾವಾಸ್ತಿ ಸರ್ವೆ ನಂಬರ 39 ಹಿಸ್ಸಾ 2 ರ ಪೂರ್ವ ದಿಕ್ಕಿನ 5 ಗುಂಟೆ ಸ್ಥಳವು ದಾವಾಸ್ತಿ ಸರ್ವೆ ನಂಬರ 40 ಹಿಸ್ಸಾ 2 ರಲ್ಲಿ ಪ್ರತಿವಾದಿಯರ ಕಬ್ಜಾದಲ್ಲಿ ಇತ್ತು ಎಂದರೆ ಸರಿಯಲ್ಲ. ಈ ರೀತಿಯಾಗಿ ಪ್ರತಿವಾದಿಯರ ಕಬ್ಜಾ ವಹಿವಾಟಿನಲ್ಲಿ ಇದ್ದ ಜಾಗವನ್ನು ಪೋಟ್ ಹಿಸ್ಸಾ ಪ್ರಕರಣದಲ್ಲಿ ತಪ್ಪಾಗಿ ನಮೂದಿಸಿ 5 ಗುಂಟೆ ಜಾಗವನ್ನು ದಕ್ಷಿಣ ದಿಕ್ಕಿನಲ್ಲಿ ತೋರಿಸಿ ತಪ್ಪಾಗಿ ಪೋಟ್ ಹಿಸ್ಸಾವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ಷದ್ರಿ 5 ಗುಂಟೆ ಜಾಗವನ್ನು ನನ್ನ ಕಬ್ಜಾ ವಹಿವಾಟಿಗೆ ತೆಗೆದುಕೊಳ್ಳಬೇಕು ಎಂಬ ಉದ್ದೇಶದಿಂದ ನ್ಯಾಯಾಲಯಕ್ಕೆ ತಪ್ಪು ಮಾಹಿತಿಯನ್ನು ನೀಡಿ ಈ ಪ್ರಕರಣನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಸರ್ವೆ ನಂಬರ 40 ಹಿಸ್ಸಾ 2 ರ ಪೋಟ್ ಹಿಸ್ಸಾ ನಕಾಶೆಯನು ಪ್ರಶ್ನಿಸಿ ಪ್ರತಿವಾದಿಯರು ಮೇಲ್ಮನವಿಯನ್ನು ಸಲ್ಲಿಸಿರುವುದರಿಂದ ಸರ್ವೆ ನಂಬರ 40 ಹಿಸ್ಸಾ 2 ಹಾಗೂ ಸರ್ವೆ ನಂಬರ 40 ಹಿಸ್ಸಾ 3

**ಮೂ.ದಾ.ನಂ. 70/2021**

ಪಿ.ಡಬ್ಲ್ಯು 1

ಎಂದು ಆದ ಪೋಟ್ ಹಿಸ್ಸಾ ನಕಾಶೆಯನು ಈ ದಾವೆಯಲ್ಲಿ ನಾವು ಅನುಸರಿಸಲು ಬರುವುದಿಲ್ಲ ಎಂದರೆ ಸಾಕ್ಷಿಯು ಈ ವಿಷಯವು ಭೂಮಾಪನ ಇಲಾಖೆಗೆ ಸಂಬಂಧಿಸಿರುತ್ತದೆ ಎಂದು ನುಡಿಯುತ್ತಾರೆ. ಸದ್ರಿ ಪೋಟ್ ಹಿಸ್ಸಾ ಪ್ರಕರಣವು ಅಂತಿಮವಾಗುವವರೆಗೆ ಈ ದಾವೆಯು ನಡೆಯತಕ್ಕದ್ದಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಹೇಗಾದರೂ ತೊಂದರೆ ನೀಡಬೇಕೆಂಬ ಉದ್ದೇಶದಿಂದ ಸುಳ್ಳು ದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸತ್ಯ ವಿಷಯವನ್ನು ಮುಚ್ಚಿಟ್ಟು ನ್ಯಾಯಾಲಯದಲ್ಲಿ ದಾವೆಯನ್ನು ದಾಖಲಿಸಿದ್ದು, ನಾನು ನ್ಯಾಯಾಲಯಕ್ಕೆ ಶುದ್ಧ ಹಸ್ತಿನಿಂದ ಬಿಂದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ